## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2371 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ, ಸಕ್ಕರೆ ಹಾಗೂ ಕಬ್ಬು ಅಭಿವೃದ್ಧಿ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 22-03-2022 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಆರ್ಥಿಕ ಸಂಕಷ್ಟದಲ್ಲಿರುವ ಕೈಮಗ್ಗ ನೇಕಾರರಿಗೆ ಆರ್ಥಿಕ ನೆರವನ್ನು ನೀಡಲಾಗುತ್ತಿದೆಯೇ; ಎಷ್ಟು ಜನರಿಗೆ ನೆರವು ನೀಡಲಾಗಿದೆ; (ವಿವರ ಒದಗಿಸುವುದು) | ರಾಜ್ಯದಲ್ಲಿ ಆರ್ಥಿಕ ಸಂಕಷ್ಟದಲ್ಲಿರುವ ಕೈಮಗ್ಗ ನೇಕಾರರಿಗೆ ಆರ್ಥಿಕ ನೆರವನ್ನು ನೀಡಲು ಅನುವಾಗುವಂತೆ "ನೇಕಾರ್ ಸಮ್ಮಾನ್ ಯೋಜನೆ"ಯನ್ನು ಜಾರಿಗೆ ತಂದಿದ್ದು, ಸದರಿ ಯೋಜನೆಯಡಿ ತಲಾ ರೂ.2,000/- ರಂತೆ ಒಟ್ಟು 47080 ನೇಕಾರರಿಗೆ ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಮುಖಾಂತರ ಮಾಡಲಾಗಿದೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ) | ಕೈಮಗ್ಗ ನೇಕಾರರು ಆರ್ಥಿಕ ಸಂಕಷ್ಟದಿಂದ ಗುಳೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಗುಳೆ ಹೋಗುತ್ತಿರುವುದನ್ನು ತಡೆಯಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; | ಕೈಮಗ್ಗ ನೇಕಾರರು ಆರ್ಥಿಕ ಸಂಕಷ್ಟದಿಂದ ಗುಳೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಗುಳೆ ಹೋಗುತ್ತಿರುವುದನ್ನು ತಡೆಗಟ್ಟಲು ಕೈಮಗ್ಗ ನೇಕಾರರಿಗೆ ಸರ್ಕಾರದ ಈ ಕೆಳಕಂಡ ಯೋಜನೆಗಳ ಮೂಲಕ ಕ್ರಮಕೈಗೊಳ್ಳಲಾಗುತ್ತಿದೆ:-<br>1. ಕೈಮಗ್ಗ ನೇಕಾರರಿಗೆ ನೇಕಾರ ಸಮ್ಮಾನ್ ಯೋಜನೆ<br>2. ಕೈಮಗ್ಗ ವಿಕಾಸ ಯೋಜನೆ<br>3. ಕೈಮಗ್ಗಗಳಿಗೆ ಮೋಟರೈಸ್ಡ್ ಜಕಾರ್ಡ್ ಒದಗಿಸುವುದು<br>4. ಕಚ್ಚಾ ನೂಲು ಖರೀದಿಗೆ ಪ್ರತಿ ಕೆ.ಜಿ ಗೆ ರೂ.15.00 ರ ಸಹಾಯಧನ<br>5. ಮೃತ ನೇಕಾರರ ಅಂತ್ಯ ಸಂಸ್ಕಾರ ವೆಚ್ಚ ಮರುಪಾವತಿ<br>6. ಸಹಕಾರ ಸಂಘಗಳಿಗೆ ನಬಾರ್ಡ್ ಪುನರ್‌ಧನದ ಬಡ್ಡಿ ಸಹಾಯಧನ ಹಾಗೂ ಶೇ.1 ಮತ್ತು ಶೇ.3 ರ ಬಡ್ಡಿ ಸಹಾಯಧನ<br>7. ಕೈಮಗ್ಗ ಉತ್ಪನ್ನಗಳಿಗೆ ಶೇ.20 ರ ರಿಬೇಟ್ ಮಾರುಕಟ್ಟೆ ಸಹಾಯ<br>8. ಏಳಿಗೆ ನಿಧಿ ಯೋಜನೆಯಡಿ ಸರ್ಕಾರದ ಸಮಚಂದಾ ಹಾಗೂ ಏಳಿಗೆ ನಿಧಿ ಮೇಲಿನ ಬಡ್ಡಿ.<br>9. ಉಣ್ಣೆ ವಲಯ ಪುನಃಶ್ಚೇತನ ಮತ್ತು ಬಲವರ್ಧನೆ ಯೋಜನೆಯಡಿ ಸಹಾಯಧನ.<br>10. ಜಿಲ್ಲಾ ವಲಯ ಕೈಮಗ್ಗ ಉದ್ದಿಮೆಗಳಿಗೆ ಸಹಾಯಧನ<br>11. ಕೇಂದ್ರ ವಲಯ ಯೋಜನೆಗಳಾದ ಬ್ಲಾಕ್ ಲೆವೆಲ್ ಹ್ಯಾಂಡ್‌ಲೂಮ್ ಕ್ಲಸ್ಟರ್ಸ್, ವಿಶೇಷ / ಜಿಲ್ಲಾ ಕೈಮಗ್ಗ ಮೇಳಗಳಲ್ಲಿ ಭಾಗವಹಿಸುವ ಅವಕಾಶ ಕಲ್ಪಿಸಲಾಗಿದೆ. |

| | | |
|---|---|---|
| ಇ) | ಕೈಮಗ್ಗ ನೇಕಾರರಿಗೆ ಹೊಸ ವಿನ್ಯಾಸಗಳನ್ನು ರೂಪಿಸಲು ಹಾಗೂ ಉತ್ಪನ್ನಗಳ ಬೇಡಿಕೆಯಿಂದ ಆದಾಯ ಹೆಚ್ಚಿಸಲು ಉತ್ತರ ಕರ್ನಾಟಕ ಭಾಗದಲ್ಲಿ ಸ್ಮಾರ್ಟ್ ಹ್ಯಾಂಡ್ ಲೂಮ್ ಡಿಸೈನ್ ಸ್ಥಾಪಿಸುವ ಯೋಜನೆಯು ಯಾವ ಹಂತದಲ್ಲಿದೆ? | ಕೈಮಗ್ಗ ನೇಕಾರರಿಗೆ ಹೊಸ ವಿನ್ಯಾಸಗಳನ್ನು ರೂಪಿಸಲು ಹಾಗೂ ಉತ್ಪನ್ನಗಳ ಬೇಡಿಕೆಯಿಂದ ಆದಾಯ ಹೆಚ್ಚಿಸಲು ಉತ್ತರ ಕರ್ನಾಟಕ ಭಾಗದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಆಸಕ್ತಿ ಇರುವ ಸಂಸ್ಥೆಗಳಿಂದ ಹಾಗೂ ವಿಷಯ ತಜ್ಞರೊಂದಿಗೆ ವಿವಿಧ ಸಭೆಗಳನ್ನು ಆಯೋಜಿಸಿ "ಹ್ಯಾಂಡ್‌ಲೂಮ್ಸ್ ಡಿಸೈನ್ ಸ್ಟುಡಿಯೋ"ವನ್ನು ಸ್ಥಾಪಿಸುವ ಸಲುವಾಗಿ ಕ್ರಮಕೈಗೊಂಡಿದ್ದು, ಆಡಳಿತಾತ್ಮಕ ಅನುಮೋದನೆ ನೀಡಲು ಪರಿಶೀಲನೆ ಹಂತದಲ್ಲಿರುತ್ತದೆ. |

ಸಂ: CI 121 JAKE 2022

(ಶಂಕರ ಬ ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಸಕ್ಕರ ಹಾಗೂ ಕಬ್ಬು ಅಭಿವೃದ್ಧಿ ಸಚಿವರು

## ಅನುಬಂಧ

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2371 ಕ್ಕೆ ಮಾಹಿತಿ**

| 2021-22 ನೇ ಸಾಲಿನ ನೇಕಾರ ಸಮ್ಮಾನ್ ಯೋಜನೆಯಡಿ ಕೈಮಗ್ಗ ನೇಕಾರರಿಗೆ ತಲಾ ರೂ.2,000/- ರಂತೆ ಡಿ.ಬಿ.ಟಿ ಮಾಡಲಾದ ಜಿಲ್ಲಾವಾರು ವಿವರ | | |
|---|---|---|
| ಕ್ರ.ಸಂ | ಜಿಲ್ಲೆ | ಡಿ.ಬಿ.ಟಿ ಮಾಡಲಾದ ಕೈಮಗ್ಗ ನೇಕಾರರ ಸಂಖ್ಯೆ |
| 1 | ಬೆಂಗಳೂರು ನಗರ | 1365 |
| 2 | ಬೆಂಗಳೂರು ಗ್ರಾಮಾಂತರ | 167 |
| 3 | ಬಾಗಲಕೋಟೆ | 11496 |
| 4 | ಬೆಳಗಾವಿ | 4933 |
| 5 | ಬಳ್ಳಾರಿ | 1473 |
| 6 | ಬೀದರ್ | 697 |
| 7 | ಚಾಮರಾಜನಗರ | 1810 |
| 8 | ಚಿಕ್ಕಮಗಳೂರು | 122 |
| 9 | ಚಿಕ್ಕಬಳ್ಳಾಪುರ | 1060 |
| 10 | ಚಿತ್ರದುರ್ಗ | 4902 |
| 11 | ದಕ್ಷಿಣ ಕನ್ನಡ | 95 |
| 12 | ದಾವಣಗೆರೆ | 481 |
| 13 | ಧಾರವಾಡ | 503 |
| 14 | ಗದಗ | 2213 |
| 15 | ಹಾಸನ | 289 |
| 16 | ಹಾವೇರಿ | 3798 |
| 17 | ಕಲಬುರಗಿ | 821 |
| 18 | ಕೊಡಗು | 56 |
| 19 | ಕೋಲಾರ | 227 |
| 20 | ಕೊಪ್ಪಳ | 1371 |
| 21 | ಮಂಡ್ಯ | 167 |
| 22 | ಮೈಸೂರು | 369 |
| 23 | ರಾಯಚೂರು | 40 |
| 24 | ರಾಮನಗರ | 113 |
| 25 | ಶಿವಮೊಗ್ಗ | 267 |
| 26 | ತುಮಕೂರು | 5838 |
| 27 | ಉಡುಪಿ | 63 |
| 28 | ಉತ್ತರ ಕನ್ನಡ | 33 |
| 29 | ವಿಜಯಪುರ | 1816 |
| 30 | ಯಾದಗಿರಿ | 495 |
| | ಒಟ್ಟು | **47080** |

ಟಿಪ್ಪಣಿ :- 2021-22 ನೇ ಸಾಲಿಗೆ ನೇಕಾರ ಸಮ್ಮಾನ್ ಯೋಜನೆಯಡಿ 49544 ಕೈಮಗ್ಗ ನೇಕಾರರಿಗೆ ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಮಾಡಲಾಗಿದ್ದು, ಇದರಲ್ಲಿ ಇತ್ತೀಚಿಗೆ 2464 ಡಿ.ಬಿ.ಟಿ ಮಾಡಲಾದ ಫಲಾನುಭವಿಗಳ ಜಿಲ್ಲಾವಾರು ಮಾಹಿತಿ ಸೇವಾ ಸಿಂಧು ಎಂ.ಐ.ಎಸ್ ವರದಿ ನಿರೀಕ್ಷಿಸಲಾಗಿದೆ.

ಅಪರ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ